ದಿ: 27-07-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ **ಭೋ**ಧಿಸಲಾಯಿತು.

**ಪಾಟೀಸವಾಲು: ಶ್ರೀ ಬಿ ಎಸ್ ಡಿ ವಕೀಲರಿಂದ:-**

1. ಈ ದಾವೆಯನ್ನು ಬಸನಗೌಡ ಮತ್ತು ಅವರ ಇಬ್ಬರು ಮಕ್ಕಳು, ಮತ್ತು ಹನುಮಗೌಡ ಮತ್ತು ಅವರ ಇಬ್ಬರ ಮಕ್ಕಳು ಒಟ್ಟು 6 ಜನರ ಮೇಲೆ ಸಲ್ಲಿಸಿರುತ್ತೇನೆ. 1 ಮತ್ತು 4 ನೇ ಪ್ರತಿವಾದಿಯರು ನನಗೆ ಚಿಕ್ಕಪ್ಪಂದಿರಾಗಬೇಕು. ಅವರಿಬ್ಬರು ನನ್ನ ತಂದೆಯ ತಮ್ಮಂದಿರಾಗಬೇಕು. ನನ್ನ ತಂದೆ ಸುಮಾರು 16 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಪ್ರತಿವಾದಿಯರು ಜಮೀನಿನಲ್ಲಿ ಬೆಳೆ ಬೆಳೆಯಲು ನನಗೆ ಬಿಟ್ಟಿರುವುದಿಲ್ಲ ಮತ್ತು ಜೀವದ ಬೆದರಿಕೆ ಹಾಕಿರುತ್ತಾರೆ. ಹೊಲದ ಹತ್ತಿರ ಹೋದರೆ ಪ್ರತಿವಾದಿಯರು ನನಗೆ ಹೊಡೆಯಲು ಬರುತ್ತಾರೆ. ಪೋಲಿಸ್ ಠಾಣೆಗೆ ಈ ಬಗ್ಗೆ ದೂರು ಕೊಡಲು ಹೋಗಿದ್ದೆ ಪೋಲಿಸರು ದೂರು ತೆಗೆದುಕೊಂಡಿರುವುದಿಲ್ಲ. ನವೆಂಬರ್ 2023 ರಲ್ಲಿ ನಾನು ಪೋಲಿಸ್ ಠಾಣೆಗೆ ಹೋಗಿದ್ದೆ ತಾರೀಖು ನನಗೆ ನೆನಪಿಲ್ಲ. ಪೋಲಿಸರಿಗೆ ದೂರು ಕೊಟ್ಟ ಪ್ರತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಪೋಲಿಸರು ದೂರು ತೆಗೆದುಕೊಳ್ಳಲಿಲ್ಲ ಎನ್ನುತ್ತಾರೆ.

2. ನೀವು ಪೋಲಿಸ್ ಠಾಣೆಗೆ ಹೋಗಿದ್ದೀರಾ ಮತ್ತು ಪೋಲಿಸರು ನಿಮ್ಮ ದೂರು ತೆಗೆದುಕೊಂಡಿಲ್ಲ ಎಂದು ವಾದಿ ಪತ್ರದಲ್ಲಿ ಬರೆಸಿದ್ದೀರಾ ಎಂದರೆ ಬರೆಸಿಲ್ಲ ಎನ್ನುತ್ತಾರೆ ಯಾವ ಪರಿಹಾರ ಕೋರಿ ಈ ದಾವೆಯನ್ನು ಸಲ್ಲಿಸಿದ್ದೀರಾ ಎಂದರೆ ಪ್ರತಿವಾದಿಯರು ಹೊಡೆಯುವುದು ಬಡಿಯುವುದು ಮಾಡುತ್ತಾರೆ ನನಗೆ ಬಿತ್ತಲು ಬಿಡುವುದಿಲ್ಲ ಎನ್ನುತ್ತಾರೆ. ಹಾಗಿದ್ದರೆ ನೀವು ಜಮೀನಿನಲ್ಲಿ ಬಿತ್ತುವುದನ್ನು ಮಾಡುವುದಿಲ್ಲ ಎಂದರೆ ಸಾಕ್ಷಿಯು ಮಾಡುತ್ತೇನೆ ಎನ್ನುತ್ತಾರೆ. ಪ್ರತಿವಾದಿಯರು ನಿಮಗೆ ಜಮೀನು ಬಿತ್ತುವುದಕ್ಕೆ ತೊಂದರೆ ಮಾಡುತ್ತಿಲ್ಲ ಎಂದರೆ ಸಾಕ್ಷಿಯು ಪ್ರತಿವಾದಿಯರು ನಮ್ಮ ಜಮೀನಿನಲ್ಲಿರುವ ಕೆ ಇ ಬಿ ಟಿ ಸಿ ಯನ್ನು ಕಿತ್ತಿಕೊಂಡು ಅವರ ಜಮೀನಿಲ್ಲಿ ಹಾಕಿಕೊಂಡಿರುತ್ತಾರೆ.

3. ಕೆ ಇ ಬಿ ಯವರಿಂದ ಟಿ ಸಿ ಯನ್ನು ಅಳವಡಿಸಲು ಅನುಮತಿಯನ್ನು ಪಡೆದಿದ್ದೀರಾ ಎಂದರೆ ಸಾಕ್ಷಿಯು ದುಡ್ಡು ಕೊಟ್ಟು ಅನುಮತಿ ಪಡೆದಿರುತ್ತೇನೆ ಎನ್ನುತ್ತಾರೆ. ಆ ಟಿ ಸಿ ಯ ಆರ್ ಆರ್ ನಂಬರ್ ಹೇಳಿ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ

ಎನ್ನುತ್ತಾರೆ. ನಿಮ್ಮ ಜಮೀನಿನಲ್ಲಿ ಟಿ ಸಿ ಅಳವಡಿಸಿದ್ದಾರೆ ಎಂದು ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಮನೆಯಲ್ಲಿ ಇದೆ ಸಿಗುತ್ತಿಲ್ಲ ಎನ್ನುತ್ತಾರೆ. ಕೆ ಇ ಬಿ ರವರಿಂದ ನಿಮ್ಮ ಹೆಸರಿಗೆ ಆರ್ ಆರ್ ನಂಬರ್ ಇರುವ ದಾಖಲಾತಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಸಿಕ್ಕಿಲ್ಲ ಎನ್ನುತ್ತಾರೆ. ಕೆ ಇ ಬಿ ರವರಿಗೆ ದಾಖಲಾತಿಯನ್ನು ಕೊಡಿ ಎಂದು ನೀವು ಅರ್ಜಿಯನ್ನು ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ಧೇನೆ ಎನ್ನುತ್ತಾರೆ. ನಾನು 8-9 ವರ್ಷದ ಹಿಂದೆ ಅರ್ಜಿಯನ್ನು ಕೊಟ್ಟಿರುತ್ತೇನೆ ಎನ್ನುತ್ತಾರೆ. ಕೆ ಇ ಬಿಯಲ್ಲಿನ ಟಿ ಸಿ ಸುಮಾರು 8-9 ವರ್ಷದಿಂದ ನನ್ನ ಹೆಸರಿನಲ್ಲಿದೆ. ನಿಮ್ಮ ಬಳಿ ದಾಖಲಾತಿ ಇರುವುದಿಲ್ಲ ನೀವು ಕೆ ಇ ಬಿ ಯಿಂದ ದಾಖಲಾತಿಯನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ದಾಖಲಾತಿ ಏಕೆ ಹಾಕಿಲ್ಲ ಎಂದರೆ ಸಾಕ್ಷಿ ಸುಮ್ಮನೆ ಇರುತ್ತಾರೆ. ನೀವು ಬೋರ್‌ವೆಲ್ ಹಾಕಿಸಿದ ಬಗ್ಗೆ ನ್ಯಾಯಾಲಯಕ್ಕೆ ರಸೀದಿಯನ್ನು ಕೊಟ್ಟಿದ್ದೀರಾ ಎಂದರೆ ಕೊಟ್ಟಿಲ್ಲ ಎನ್ನುತ್ತಾರೆ.

4. ದಾವಾ ಸರ್ವೆ ನಂಬರ್ 72/1. ಸರ್ವೆ ನಂಬರ್ 72 ರಲ್ಲಿ ಒಟ್ಟು 06-00 ಎಕರೆ ಜಮೀನು ಇದೆ. ಸದರಿ ಜಮೀನು ಮೊದಲು ನನ್ನ ತಂದೆಯ ಹೆಸರಿನಲ್ಲಿತ್ತು. ನಂತರ ನನ್ನ ತಂದೆ ಯಂಕೋಬ, ಬಸನಗೌಡ ಮತ್ತು ಹನುಮಗೌಡ ಇವರು ಭಾಗ ಮಾಡಿಕೊಂಡು ಅವರ ಹೆಸರಿನಲ್ಲಿ ಆಗಿದೆ. ಭಾಗ ಮಾಡಿಕೊಂಡಿರುವ ಮುಟೇಶನ್ ಮತ್ತು ಪಹಣಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎನ್ನುತ್ತಾರೆ.

ಮುಂದುವರಿದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.
ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.
ದೇವದುರ್ಗ